# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 587 |
| ಸದಸ್ಯರ ಹೆಸರು | ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09-03-2020 |
| ಉತ್ತರಿಸಬೇಕಾದ ಸಚಿವರು | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಹಾಗೂ ಸಕಾಲ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ/ಅನುದಾನ ರಹಿತ ಶಾಲೆಗಳಲ್ಲಿ ಆಟದ ಮೈದಾನಗಳಿವೆಯೇ; ಇದು ಅತ್ಯಾವಶ್ಯಕ ಎಂಬುದು ಸರ್ಕಾರದ ಗಮನದಲ್ಲಿದೆಯೇ; | ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಆಟದ ಮೈದಾನಗಳು ಇರುವುದಿಲ್ಲ.<br>ರಾಜ್ಯ .ದಲ್ಲಿರುವ ಒಟ್ಟು ಶಾಲೆಗಳು ಹಾಗೂ ಆಟದ ಮೈದಾನವಿರುವ ಶಾಲೆಗಳ ಸಂಖ್ಯೆಯನ್ನು ಒದಗಿಸಲಾಗಿದೆ. (ಕೆಳಗಿನ ಕೋಷ್ಟಕ ನೋಡಿ) |

| | ಒಟ್ಟು ಶಾಲೆಗಳು | | ಆಟದ ಮೈದಾನ ಇರುವ ಶಾಲೆಗಳು | |
|---|---|---|---|---|
| | ಪ್ರಾಥಮಿಕ | ಪ್ರೌಢ | ಪ್ರಾಥಮಿಕ | ಪ್ರೌಢ |
| ಸರ್ಕಾರಿ | 43,492 | 4,696 | 24,823 | 3,979 |
| ಅನುದಾನಿತ | 3015 | 3,801 | 2,718 | 3,644 |
| ಅನುದಾನರಹಿತ | 14,428 | 6,746 | 11,316 | 5,926 |

[2018-19ನೇ ಸಾಲಿನ SATS ನಲ್ಲಿರುವ ಮಾಹಿತಿಯಂತೆ]

ಶಾಲೆಗಳಲ್ಲಿ ಆಟದ ಮೈದಾನಗಳಿರುವುದು ಅತ್ಯವಶ್ಯಕ ಎಂಬುದು ಸರ್ಕಾರದ ಗಮನದಲ್ಲಿದೆ.

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಆ) | ಮಕ್ಕಳ ಮನೋವಿಕಾಸಕ್ಕೆ ಮತ್ತು ದೈಹಿಕ ಸಾಮರ್ಥ್ಯದ ಬೆಳವಣಿಗೆಗೆ ಆಟದ ಮೈದಾನಗಳ ಅಗತ್ಯತೆ ಇದೆ ಎಂಬ ಅರಿವು ಸರ್ಕಾರಕ್ಕಿದೆಯೇ; ಇದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು; | ರಾಜ್ಯದ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಆಟದ ಮೈದಾನವಿರುವ ಶಾಲೆಗಳನ್ನು ಹೊರತುಪಡಿಸಿ, ಆಟದ ಮೈದಾನ ಇಲ್ಲದಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ-ಆಟದ ಮೈದಾನದ ಕೊರತೆ ನೀಗಿಸಲು, ಆಟದ ಮೈದಾನ ರಹಿತ ಶಾಲೆಗಳಲ್ಲಿ ದೈಹಿಕ ಶಿಕ್ಷಣದ ಚಟುವಟಿಕೆಗಳನ್ನು ಶಾಲೆಗೆ ಲಭ್ಯವಿರುವ ಒಳಾಂಗಣದಲ್ಲಿ, ಸಾರ್ವಜನಿಕ ಮೈದಾನಗಳಲ್ಲಿ, ಶಾಲೆಯ ಅಕ್ಕ ಪಕ್ಕದ ಖಾಸಗಿ ಮೈದಾನಗಳಲ್ಲಿ, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದ ಕ್ರೀಡಾಂಗಣಗಳಲ್ಲಿ ಕ್ರೀಡೆಗಳನ್ನು, ಯೋಗ, ಪಥಸಂಚಲನ ಇತರೆ ಹಗುರ ಉಪಕರಣ [ಲೆಜಿಮ್ಸ್, ಡಂಬೆಲ್ಸ್, ಹೂಪ್ಸ್, ವ್ಯಾಂಡ್ಸ್ ಮತ್ತು ಇಂಡಿಯನ್ ಕ್ಲಬ್ಸ್] ಚಟುವಟಿಕೆಗಳನ್ನು ರೂಡಿಸಿ ವಿದ್ಯಾರ್ಥಿಗಳನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಬಲಗೊಳಿಸಲಾಗುತ್ತಿದೆ. |

| | | |
|---|---|---|
| | | ಇತ್ತೀಚೆಗೆ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 755 ಪಿಜಿಸಿ 2017, ದಿನಾಂಕ 08-03-2018ರಲ್ಲಿ ಸರ್ಕಾರವು ವಿವಿಧ ಹಂತದ ಶಾಲೆಗಳನ್ನು ಪ್ರಾರಂಭಿಸಲು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಹೊಂದಿರಬೇಕಾದ ಕನಿಷ್ಠ ವಿಸ್ತೀರ್ಣದ ಜಮೀನನ್ನು ನಿಗಧಿಪಡಿಸಿದ್ದು, ಇದರಲ್ಲಿ ಆಟದ ಮೈದಾನಕ್ಕಾಗಿ ಸ್ಥಳ ಕಡ್ಡಾಯವಾಗಿ ಒದಗಿಸಲು ತಿಳಿಸಲಾಗಿದೆ. |

ಇಡಿ 36 ಪಿಜಿಸಿ 2020

[ಎಸ್.ಸುರೇಶ್ ಕುಮಾರ್]
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು.